ದಿನಾಂಕ 03-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಎಎಂ ವಕೀಲರವರಿಂದಃ

ನಿಮ್ಮ ತಂದೆಯವರಿಗೆ ಎಷ್ಟು ಮಂದಿ ಮಕ್ಕಳು ಎಂದರೆ ಇಬ್ಬರು ಮಕ್ಕಳು. ನಿಮ್ಮ ತಾಯಿಯವರು ಇದ್ದಾರೆಯೇ ಎಂದರೆ ಇರುತ್ತಾರೆ. ನಿಮ್ಮ ಸಹೋದರ ಎಲ್ಲಿ ಇರುತ್ತಾರೆಂದರೆ ಬೆಂಗಳೂರಿನಲ್ಲಿ ಇರುತ್ತಾರೆ. ನಿಮ್ಮ ಸಹೋದರನನ್ನು ನೀವು ಸಲ್ಲಿಸಿರುವ ಪರಿಹಾರದ ಅರ್ಜಿಯಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತೀರಾ ಎಂದರೆ ಇಲ್ಲ. ನೀವು ಸಲ್ಲಿಸಿರುವ ಪರಿಹಾರದ ಅರ್ಜಿಯ ಬಗ್ಗೆ ನಿಮ್ಮ ಸಹೋದರನಿಗೆ ಗೊತ್ತಿದೆಯೇ ಎಂದರೆ ಹೌದು. ಅಪಘಾತದ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರನ್ನು ಪೋಲೀಸಿನವರಿಗೆ ಯಾರು ನೀಡಿರುವುದು ಎಂದರೆ ನಾನೇ ನೀಡಿರುತ್ತೇನೆ. ಘಟನೆಯಾಗಿದೆ ಎಂದು ಹೇಳುವ ದಿನ ನಿಮ್ಮ ತಂದೆಯವರು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದರು ಎಂದರೆ ಉಡುಪಿಯಿಂದ ಮಂಗಳೂರಿಗೆ ಹೋಗುತ್ತಿದ್ದರು. ನಿಮ್ಮ ತಂದೆಯವರು ಯಾವ ವಾಹನದಲ್ಲಿ ಹೋಗುತ್ತಿದ್ದರು ಎಂದರೆ ಬೈಕ್ ನಲ್ಲಿ ಹೋಗುತ್ತಿದ್ದರು. ನಿಮ್ಮ ತಂದೆಯವರು ಸ್ವತಃ ಬೈಕ್ ನ್ನು ಚಲಾಯಿಸುತ್ತಿದ್ದರೆ ಅಥವಾ ಬೇರೆಯವರ ಬೈಕ್ ನಲ್ಲಿ ಹೋಗುತ್ತಿದ್ದರೆ ಎಂದರೆ ಬೇರೆಯವರ ಬೈಕ್ ನಲ್ಲಿ ಹೋಗುತ್ತಿದ್ದರು. ನಿಮ್ಮ ತಂದೆಯವರು ಹೋಗಿದ್ದರೆಂದು ಹೇಳುವ ಬೈಕ್ ನವರು ನಿಮಗೆ ಪರಿಚಯಸ್ಥರೇ ಎಂದರೆ ಅಷ್ಟು ಸಂಬಂಧ ಇರುವುದಿಲ್ಲ. ಮೋಟಾರ್ ಬೈಕ್ ನ ಮಾಲೀಕರನ್ನು ಹಾಗೂ ಮೋಟಾರ್ ಬೈಕ್ ಗೆ ವಿಮೆಯನ್ನು ನೀಡಿದವರನ್ನು ಈ ಅರ್ಜಿಯಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತೀರಾ ಎಂದರೆ ಇಲ್ಲ. ಅವರನ್ನು ಪಕ್ಷಕಾರರನ್ನಾಗಿ ಮಾಡದೇ ಇರಲು ಏನಾದರೂ ಕಾರಣ ಇದೆಯೇ ಎಂದರೆ ಇಲ್ಲ. ಅಪಘಾತವನ್ನು ನೀವು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಹೌದು. ಅಪಘಾತದ ಬಗ್ಗೆ ನಿಮಗೆ ಹೇಗೆ ತಿಳಿಯಿತು

ಎಂದರೆ ನನ್ನ ಚಿಕ್ಕಪ್ಪನವರಿಗೆ ಕರೆ ಬಂದಿತ್ತು ಅವರು ನನಗೆ ತಿಳಿಸಿದರು. ಅಪಘಾತವಾದ ಎಷ್ಟು ಸಮಯದ ನಂತರ ನೀವು ನಿಮ್ಮ ತಂದೆಯನ್ನು ನೋಡಿರುತ್ತೀರಿ ಮತ್ತು ಎಲ್ಲಿ ನೋಡಿರುತ್ತೀರಿ ಎಂದರೆ 2 ಗಂಟೆಯ ಒಳಗೆ ಮಣಿಪಾಲ್ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಕೆಎ-20-ಜೆಡ್-8103 ನೊಂದಣಿ ಸಂಖ್ಯೆಯ ಕಾರಿನ ಚಾಲಕರ ಅತೀ ವೇಗ ಮತ್ತು ಅಜಾಗರೂಕತೆಯಿಂದ ಅಪಘಾತವಾಗಿರಿರುತ್ತದೇ ಎಂದು ನಿಮಗೆ ಯಾರು ಹೇಳಿದರು ಎಂದರೆ ನಾನು ಸ್ಥಳಕ್ಕೆ ಹೋಗಿದ್ದೆನು ಅಲ್ಲಿ ಅಪಘಾತವನ್ನು ನೋಡಿದವರು ತಿಳಿಸಿದರು. ಅಪಘಾತವಾದ ಸ್ಥಳಕ್ಕೆ ನೀವು ಎಷ್ಟು ದಿನಗಳ ನಂತರ ಹೋಗಿರುತ್ತೀರಿ ಎಂದರೆ ನನಗೆ ಕರೆ ಬಂದ ಕೂಡಲೇ ಹೋಗಿದ್ದೆನು. ಪೋಲೀಸಿನವರು ಸ್ಥಳಕ್ಕೆ ಎಷ್ಟು ದಿನಗಳ ನಂತರ ಕರೆದಿದ್ದರು ಎಂದರೆ ಅಪಘಾತವಾದ ಒಂದು ವಾರದ ಒಳಗೆ ಕರೆದಿದ್ದರು. ನೀವು ಹೋದ ಸಮಯದಲ್ಲಿ ಕಾರಿನ ಚಾಲಕರ ಅಜಾಗರೂಕತೆಯಿಂದ ಅಪಘಾತವಾಗಿತ್ತು ಎಂದು ಹೇಳಿದ ವ್ಯಕ್ತಿಗಳು ಇದ್ದರೆ ಹಾಗೂ ಸ್ಥಳ ಪಂಚನಾಮೆಯನ್ನು ಮಾಡುವಾಗಲೂ ಬಂದಿದ್ದರೆ ಎಂದರೆ ಹೌದು. ಅವರ ಹೆಸರು ಏನು ಎಂದರೆ ಅಜೀಜ್ ಉದ್ಯಾವರ. ಅವರ ಎಲ್ಲಿ ಇರುವುದು ಮತ್ತು ಅವರು ಏನು ಉದ್ಯೋಗವನ್ನು ಮಾಡುತ್ತಾರೆ ಎಂದರೆ ಉದ್ಯಾವರದಲ್ಲಿ ಇರುವುದು ಏನು ಉದ್ಯೋಗವನ್ನು ಮಾಡುತ್ತಾರೆ ಎಂದರೆ ಗೊತ್ತಿಲ್ಲ. ಅಜೀಜ್ ಉದ್ಯಾವರ ಹಾಗೂ ನಿಮ್ಮ ಮಸೀದಿಗಳು ಒಂದೇ ಆಗಿರುತ್ತವೆಯೇ ಎಂದರೆ ಇಲ್ಲ. ನಿಮ್ಮ ತಂದೆಯವರನ್ನು ಒಳರೋಗಿಯಾಗಿ ಆಸ್ಪತ್ರೆಗೆ ದಾಖಲಿಸುವಾಗ ನೀವು ಇರಲಿಲ್ಲ ಎಂದರೆ ಹೌದು, ನಾನು ಸ್ಕ್ಯಾನಿಂಗ್ ನಡೆಯುವಂತಹ ಸಮಯದಲ್ಲಿ ಹೋದೆನು. ನಿಮ್ಮ ತಂದೆಯವರನ್ನು ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದವರು ಯಾರು ಎಂದರೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ಅಪಘಾತದ ಹಿನ್ನೆಲೆಯ ಬಗ್ಗೆ ಮಾಹಿತಿಯನ್ನು ಯಾರು

ನೀಡಿರುವುದು ಎಂದರೆ ನಾನೇ ನೀಡಿದೆನು, ಎಷ್ಟು ಗಂಟೆಗೆ ನೀಡಿರುತ್ತೀರಿ ಎಂದರೆ ಅದರ ಬಗ್ಗೆ ನೆನಪಿಲ್ಲ.  ನಿಮ್ಮ ತಂದೆಯವರನ್ನು ಯಾವ ದಿನದಂದು ವಾರ್ಡ್ ಗೆ ನೀಡಿರುತ್ತಾರೆಂದರೆ 25 ದಿನಗಳ ಕಾಲ ಐಸಿಯು ನಲ್ಲಿ ಇದ್ದರು, ನಂತರ ವಾರ್ಡ್ ಗೆ ನೀಡಿದ್ದರು ಅಲ್ಲಿ 6  ದಿನಗಳ ಕಾಲ ಇದ್ದರು.  ಐಸಿಯು ನಿರ್ಬಂಧಿತ ಪ್ರದೇಶವಾಗಿದ್ದು, ಅಲ್ಲಿನ ಆಸ್ಪತ್ರೆಯ  ಸಿಬ್ಬಂದಿಯವರೇ ಊಟ ಔಷಧಿಗಳನ್ನು ಅಲ್ಲಿನ ಸಿಬ್ಬಂದಿಯವರೇ ನೀಡುತ್ತಾರೆಂದರೆ ಹೌದು.  ಅಪಘಾತವಾದ ನಂತರ  ನೀವು ನಿಮ್ಮ ತಂದೆಯವರೊಂದಿಗೆ ಯಾವ ದಿನದಂದು ಮಾತನಾಡಿರುತ್ತೀರಿ ಎಂದರೆ ಅವರು  ಅಪಘಾತವಾದ ನಂತರ ತೀರಿಕೊಳ್ಳುವವರೆಗೆ ಪ್ರಜ್ಞಾಹೀನರಾಗಿದ್ದರು.   ನೀವೇ ಸ್ವತಃ ನಿಮ್ಮ ತಂದೆಯವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿಕೊಂಡು ಬಂದಿರುತ್ತೀರಿ ಅಥವಾ ವೈದ್ಯರ ಸಲಹೆಯ ಮೇರೆಗೆ ಅವರನ್ನು ಬಿಡುಗಡೆ ಮಾಡಿರುತ್ತಾರಾ ಎಂದರೆ ನಮಗೆ ಹಣಕಾಸಿನ ಸಮಸ್ಯೆ ಇದ್ದು, ನಮ್ಮ ತಂದೆಯವರು ಅಪಘಾತವಾದ ದಿನ ಹೇಗೆ ಇದ್ದರೋ ಅದೇ ರೀತಿಯಲ್ಲಿ ಇದ್ದರು ಆ ಕಾರಣ ಮನೆಯಲ್ಲಿಯೇ ಫಿಸಿಯೋಥೆರಪಿ ಮಾಡಿಸಿಕೊಳ್ಳಲಿ ಎಂದು ಬಂದಿದ್ದೆವು.  ನಿಮ್ಮ ತಂದೆಯವರಿಗೆ ಮನೆಯಲ್ಲಿಯೇ ಫಿಸಿಯೋಥೆರಪಿ ಮಾಡಿಸಲು ಕೆಎಂಸಿ ವೈದ್ಯರು ಸಲಹೆಯನ್ನು ನೀಡಿರುತ್ತಾರೆಯೇ ಎಂದರೆ ಹೇಳಿದ್ದರು.   ನಿಮ್ಮ ತಂದೆಯವರನ್ನು ಕೆಎಂಸಿ ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿಕೊಂಡು ಬಂದ ನಂತರ ಪುನಃ ಕೆಎಂಸಿ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲು ಮಾಡಿರುತ್ತೀರಾ ಅಥವಾ ಹೊರರೋಗಿಯಾಗಿ ಕರೆದುಕೊಂಡು ಚಿಕಿತ್ಸೆಯನ್ನು ಮಾಡಿಸಿರುತ್ತೀರಾ ಎಂದರೆ ಇಲ್ಲ. ಮುಂದುವರೆದ ಚಿಕಿತ್ಸೆಗೆ ಸಂಬಂಧಿಸಿದಂತೆ ಮಾತ್ರೆಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿ ಸಲಹಾ ಚೀಟಿಯನ್ನು ಬರೆದುಕೊಟತ್ತಾರೆಯೇ ಎಂದರೆ ಹೌದು.  ಬೀಚ್ ಹೀಲಿಂಗ್ ಹೋಂ ಎನ್ನುವುದು ಆಸ್ಪತ್ರೆಯೇ ಎಂದರೆ ಹೌದು. ಕೆಎಂಸಿ ಆಸ್ಪತ್ರೆಯಲ್ಲಿ ನೀಡಿದ

ಚಿಕಿತ್ಸೆಯ ದಾಖಲೆಗಳನ್ನು ಬೀಚ್ ಹೀಲಿಂಗ್ ಹೋಂ ರವರಿಗೆ ನೀಡಿರುತ್ತೀರಾ ಎಂದರೆ ಹೌದು. ನಿಮ್ಮ ತಂದೆಯವರನ್ನು ನೀವೇ ಬೀಚ್ ಹೀಲಿಂಗ್ ಹೋಂ ಗೆ ಕರೆದುಕೊಂಡು ಹೋಗಿರುತ್ತೀರಾ ಅಥವಾ ಅವರೇ ಬಂದಿದ್ದರೆ ಎಂದರೆ ಅವರದೇ ಒಂದು ಗುಂಪು ಇದ್ದು, ಅವರು ನಮ್ಮ ಮನೆಗೆ ಬಂದಿದ್ದರು. ಬೀಚ್ ಹೀಲಿಂಗ್ ಹೋಂ ಯಾವ ವೈದ್ಯರಿಗೆ ಸೇರಿದ್ದು ಎಂದು ನಿಮಗೆ ತಿಳಿದಿದೆಯೇ ಎಂದರೆ ಡಾ.ರಫೀಕ್ ರವರಿಗೆ ಸೇರಿದ್ದಾಗಿದೆ. ಬೀಚ್ ಹೀಲಿಂಗ್ ಹೋಂ ನವರಿಗೆ ನೀವು ಯಾವ ರೀತಿಯಲ್ಲಿ ಹಣವನ್ನು ಪಾವತಿ ಮಾಡಿರುತ್ತೀರಿ ಎಂದರೆ ನಗದು ರೂಪದಲ್ಲಿ ನೀಡಿರುತ್ತೇವೆ. ಕೆಎಂಸಿ ಆಸ್ಪತ್ರೆಯ ವೈದ್ಯರು ಬೀಚ್ ಹೀಲಿಂಗ್ ಹೋಂ ಗೆ ಹೋಗುವಂತೆ ಹೇಳಿರುತ್ತಾರಾ ಎಂದರೆ ಇಲ್ಲ. ಬೀಚ್ ಹೀಲಿಂಗ್ ಹೋಂ ಗೆ ನೀವು ಸ್ವಂತ ಇಚ್ಚೆಯಿಂದ ಕರೆದುಕೊಂಡು ಹೋಗಿರುವುದೇ ಎಂದರೆ ಕೆಎಂಸಿ ಆಸ್ಪತ್ರೆಯವರು ಫಿಸಿಯೋಥೆರಪಿ ಮಾಡಿಸಿ ಎಂದು ಸಲಹೆ ನೀಡಿದ್ದರಿಂದ ಬೀಚ್ ಹೀಲಿಂಗ್ ಹೋಂ ನ ಮೂಲಕ ಚಿಕಿತ್ಸೆಯನ್ನು ಕೊಡಿಸಿದೆವು. ಎಷ್ಟು ದಿನಗಳ ಕಾಲ ಫಿಸಿಯೋಥೆರಪಿ ಚಿಕಿತ್ಸೆಯನ್ನು ಕೊಡಿಸಿರುತ್ತೀರಿ ಎಂದರೆ ಆಸ್ಪತ್ರೆಯಿಂದ ಬಿಡುಗಡೆಯಾದ ದಿನದಿಂದ ಅವರು ಸಾಯುವವರೆಗೂ ಕೊಡಿಸಿರುತ್ತೇವೆ. ಆಸ್ಪತ್ರೆಯಿಂದ ಬಿಡುಗಡೆಯಾದ ಎಷ್ಟು ಸಮಯದ ನಂತರ ನಿಮ್ಮ ತಂದೆಯವರು ತೀರಿಕೊಂಡರು ಎಂದರೆ 10 ತಿಂಗಳ ನಂತರ ತೀರಿಕೊಂಡರು. ಬೀಚ್ ಹೀಲಿಂಗ್ ಹೋಂ ನ ಮೂಲಕ ಚಿಕಿತ್ಸೆಯನ್ನು ಕೊಡಿಸುತ್ತಿರುವಾಗ ನಿಮ್ಮ ತಂದೆಯವರ ಆರೋಗ್ಯ ಸುಧಾರಣೆಯಾದ ಬಗ್ಗೆ ನಿಮಗೆ ತಿಳಿಯಿತೇ ಎಂದರೆ ಇಲ್ಲ. 1 ರಿಂದ 3 ತಿಂಗಳ ಕಾಲ ಫಿಸಿಯೋಥೆರಪಿ ಚಿಕಿತ್ಸೆಯನ್ನು ಕೊಡಿಸಿದಾಗ ನಿಮ್ಮ ತಂದೆಯವರ ಆರೋಗ್ಯದಲ್ಲಿ ಸುಧಾರಣೆ ಕಂಡುಬಾರದೇ ಇದ್ದರೂ ಫಿಸಿಯೋಥೆರಪಿ ಚಿಕಿತ್ಸೆಯನ್ನು ಮುಂದುವರೆಸಲು ಏನು ಕಾರಣ ಎಂದರೆ ಮುಂದಿನ

ದಿನಗಳಲ್ಲಿ ಅನುಕೂಲವಾಗಬಹುದು ಎಂದು ಕೊಡಿಸಿದೆವು.   ನಿಮ್ಮ ತಂದೆಯವರು ತೀರಿಕೊಂಡ ವಿಷಯವನ್ನು ಸ್ಥಳೀಯ ಪೋಲೀಸ್ ಠಾಣೆಯಲ್ಲಿ ತಿಳಿಸಿರುತ್ತೀರಾ ಎಂದರೆ ಹೌದು. ನಿಮ್ಮ ತಂದೆಯವರು ತೀರಿಕೊಂಡ ವಿಷಯವನ್ನು ಸ್ಥಳೀಯ ಪೋಲೀಸ್ ಠಾಣೆಗೆ ಮೌಖಿಕವಾಗಿ ತಿಳಿಸಿರುತ್ತೀರಾ ಅಥವಾ ಬರವಣಿಗೆಯ ಮೂಲಕ ತಿಳಿಸಿರುತ್ತೀರಾ ಎಂದರೆ ಮಾಹಿತಿಯನ್ನು ನೀಡಿರುತ್ತಾರೆ, ಅದನ್ನು ಲಿಖಿತವಾಗಿ ನೀಡಿರುತ್ತಾರಾ ಎನ್ನುವುದು ನನಗೆ ಗೊತ್ತಿಲ್ಲ.   ನಿಮ್ಮ ತಂದೆಯವರು ತೀರಿಕೊಂಡ ನಂತರ ಅವರ ಶವ ಪರೀಕ್ಷೆಯನ್ನು ಮಾಡಿಸಲಾಗಿರುತ್ತದೆಯೇ ಎಂದರೆ ಇಲ್ಲ.  ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಪು ಪೋಲೀಸ್ ಠಾಣೆಯವರು ನಿಮ್ಮ ತಂದೆಯವರ ಶವ ಪರೀಕ್ಷೆಯನ್ನು ಮಾಡಲು ಅನುವು ಮಾಡಿಕೊಡುತ್ತಿಲ್ಲ ಎಂದು ಅವರ ಮೇಲಾಧಿಕಾರಿಗಳವರಿಗೆ ತಿಳಿಸಿರುತ್ತೀರಾ ಎಂದರೆ ಇಲ್ಲ.  ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ  ಶವ ಪರೀಕ್ಷೆ ನಡೆಸುವುದು ಅಗತ್ಯ ಇಲ್ಲ ಎಂದು ಹೇಳಿರುತ್ತೀರಿ ಆ ಬಗ್ಗೆ ಪೋಲೀಸಿನವರು ನಿಮಗೆ ಬರವಣಿಗೆಯಲ್ಲಿ ನೀಡಿರುತ್ತಾರಾ ಎಂದರೆ ಇಲ್ಲ.  ನಿಮ್ಮ ತಂದೆಯವರು ಆರೋಗ್ಯ ಸಮಸ್ಯೆ ಕಂಡುಬಂದಾಗ ಸಹಜವಾಗಿ ಯಾವ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ಅವರಿಗೆ ಯಾವುದೇ ಹೆಚ್ಚಿ ನ ಆರೋಗ್ಯ ಸ್ಥಿತಿಯು ಕಂಡುಬಂದಿರಲಿಲ್ಲ.   2019 ರ ಡಿಸೆಂಬರ್ ತಿಂಗಳಿನಲ್ಲಿ ಹೃದಯ ಸಮಸ್ೆಯಗೆ ಸಂಬಂಧಿಸಿದಂತೆ ನಿಮ್ಮ ತಂದೆಯವರು ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದಾರೆಯೇ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ.  ನೀವು ನಿಮ್ಮ ತಂದೆ-ತಾಯಿಯವರೊಂದಿಗೆ ವಾಸವಾಗಿದ್ದಿರಿ ಎಂದರೆ ಹೌದು.   ಅಪಘಾತವಾಗಿದೆ ಎಂದು ಹೇಳುವ ಪೂರ್ವದಲ್ಲಿ ನಿಮ್ಮ ತಂದೆಯವರು ಪ್ರತೀ ದಿನ ಎಷ್ಟು ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದರು ಎಂದರೆ ನನಗೆ ಮಾಹಿತಿ ಇಲ್ಲ.  ನಿಮ್ಮ ತಂದೆಯವರಿಗೆ ಯಾವುದೇ

ರೀತಿಯ ಫಿಸಿಯೋಥೆರಪಿ ಚಿಕಿತ್ಸೆಯನ್ನು ಕೊಡಿಸಿರುವುದಿಲ್ಲ, ಅದಕ್ಕೆ ಸಂಬಂಧಿಸಿದಂತೆ ನೀವು ಅದಕ್ಕೆ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸ್ವಲ್ಪ ಹಣವನ್ನು ನೀಡಿರುತ್ತೇವೆ, ಉಳಿಕೆ ಹಣ ಬಾಕಿ ಇದೆ. ನಿಮ್ಮ ತಂದೆಯವರಿಗೆ ನೀಡಿದ ಚಿಕಿತ್ಸೆಯ ಹಣದ ವಿಚಾರವಾಗಿ ಯಾವುದಾದರೂ ವಿಮಾ ಯೋಜನೆಯ ಅಡಿಯಲ್ಲಿ ಹಣವು ಬಂದಿರುತ್ತದೆಯೇ ಎಂದರೆ ಆರೋಗ್ಯ ಕಾರ್ಡಿನ ಅಡಿಯಲ್ಲಿ 50,000/- ರೂ. ಬಂದಿರುತ್ತದೆ. ಆಸ್ಪತ್ರೆ ಬಿಡುಗಡೆ ಪತ್ರವನ್ನು ಹಾಜರು ಮಾಡಿರುವುದಿಲ್ಲ ಎಂದರೆ ಮಾಡಿರುತ್ತೇನೆ. ನಿಪಿ.13 ರ ಮೂಲ ಪ್ರತಿಯು ಯಾರ ಬಳಿ ಇದೆ ಎಂದರೆ 50,000/- ರೂ.ಗಳನ್ನು ಪಾವತಿಸಿದವರ ಬಳಿ ಇರುತ್ತದೆ. ನಿಮ್ಮ ತಂದೆಯವರು ಏನು ಕೆಲಸವನ್ನು ಮಾಡುತ್ತಿದ್ದರು ಎಂದರೆ ತೆಂಗಿನ ಗಿಡಗಳ ಫಾತಿ ಮಾಡುವುದು, ತೆಂಗಿನ ಕಾಯಿಯ ಸಿಪ್ಪೆ ತೆಗೆಯುವುದು ಹೀಗೆ ಕೂಲಿ ಕೆಲಸವನ್ನು ಮಾಡುತ್ತಿದ್ದರು. ನಿಮ್ಮ ತಂದೆಯವರು ಮಾಡುತ್ತಿದ್ದ ಕೆಲಸವು ಖಾಯಂ ಆಗಿರುವುದಿಲ್ಲ ಎಂದರೆ ಅದು ಕೂಲಿ ಕೆಲಸ. ನಿಮ್ಮ ತಂದೆಯವರು ಯಾವ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದರು ಎಂದರೆ ಗೊತ್ತಿಲ್ಲ. ನಿಮ್ಮ ತಂದೆಯವರು ತಿಂಗಳಿಗೆ 20,000/- ರೂ.ಗಳನ್ನು ಸಂಪಾದನೆ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ಇಲ್ಲ. ನಿಮ್ಮ ತಂದೆಯವರು ಏನು ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ ಎಂದರೆ 10 ನೇ ತರಗತಿಯ ಒಳಗೆ ಮಾಡಿರುತ್ತಾರೆ. ನಿಮ್ಮ ತಂದೆಯವರು ಪಾನ್ ಕಾರ್ಡ್ ಹೊಂದಿದ್ದರೆ ಎಂದರೆ ಹೌದು, ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ನಿಮ್ಮ ತಂದೆಯವರ ಪಾನ್ ಕಾರ್ಡ್ ನ್ನು ನೋಡಿರುತ್ತೀರಾ ಅದರಲ್ಲಿ ನಿಮ್ಮ ತಂದೆಯವರ ವಯಸ್ಸು ಎಷ್ಟು ಎಂದು ನಮೂದು ಆಗಿದೆ ಎಂದರೆ 1957 ಎಂದು ಇಸವಿ ಎಂದು ನಮೂದು ಆಗಿದೆ. ನಿಪಿ.23 ರಲ್ಲಿ ಕಾಣಿಸಿರುವ ನಿಮ್ಮ ತಂದೆಯವರ ಜನನ ದಿನಾಂಕ

ಹಾಗೂ ಪಾನ್ ಕಾರ್ಡ್ ನಲ್ಲಿರುವ ಜನನ ದಿನಾಂಕ ಒಂದೇ ಆಗಿರುತ್ತದೆ ಎಂದರೆ ನೋಡಿರುವುದಿಲ್ಲ. ನಿಪಿ.23 ರ ಅನುಸಾರ ನಿಮ್ಮ ತಂದೆಯವರು ಮೃತರಾಗುವ ಕಾಲಕ್ಕೆ ಅವರ ವಯಸ್ಸು 65 ದಾಟಿತ್ತು ಎಂದರೆ ಹೌದು. ಅಪಘಾತದಿಂದ ಆಗಿದೆ ಎಂದು ಹೇಳುವ ಗಾಯಗಳಿಗೂ ನಿಮ್ಮ ತಂದೆಯವರ ಸಾವಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಇರುತ್ತದೆ. ನಿಮ್ಮ ತಂದೆಯವರು ಸ್ವಾಭಾವಿಕವಾಗಿ ಮರಣ ಹೊಂದಿದ್ದರಿಂದ ಪೋಲೀಸಿನವರು ಶವ ಪರೀಕ್ಷೆಯನ್ನು ಮಾಡಿಸಲು ಒಪ್ಪಿರುವುದಿಲ್ಲ ಎಂದರೆ ನನ್ನ ತಂದೆಯವರು ಅವರ ತಲೆಗೆ ಆಗಿದ್ದ ಪೆಟ್ಟಿನ ಕಾರಣದಿಂದ ತೀರಿಕೊಂಡರು. ಅಪಘಾತವು ನಿಮ್ಮ ತಂದೆಯವರು ಹೋಗುತ್ತಿದ್ದ ದ್ವಿಚಕ್ರ ವಾಹನದ ಸವಾರನ ತಪ್ಪಿ ನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ಕೆಎ-20-ಜೆಡ್-8103 ಸಂಖ್ಯೆಯ ಕಾರಿನ ಚಾಲಕರ ತಪ್ಪಿ ನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನಿಮ್ಮ ತಂದೆಯವರ ಚಿಕಿತ್ಸೆಗೆ ಆಗಿರುವಂತಹ ಎಲ್ಲಾ ಬಿಲ್ ಗಳು ಕ್ಲೇಮು ಆಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಸೌಖ್ಯವಾಗಿ ಇಲ್ಲದ ಕಾರಣ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಮತ್ತು ಅವರಿಗೆ ಯಾವುದೇ ಆದಾಯವೂ ಇರಲಿಲ್ಲ ಎಂದರೆ ಅಪಘಾತಕ್ಕೆ ಪೂರ್ವದಲ್ಲಿ ಅವರು ಕಾರ್ಯ ಚಟುವಟಿಕೆಯಿಂದ ಇದ್ದರು. ಹೆಚ್ಚಿ ನ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎ.ಸಿ.ಜೆ.ಎಂ. ಉಡುಪಿ.